ಮೈಸೂರ ಗೆಜೆಟ್

ನಂ 21 ಸರ್ಕಾರದಿಂದ ಘಾಯಿಷ್ ಆದ್ದು. ಸ್ 1890.

ಬೆಂಗಳೂರು, ಶನಿವಾರ, ಮೇ ತಾ|| 31, ಸ್ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ರು ವ ಸೆರ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಸ್‌ಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದ್ದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಗಳು ವ ರೆಗ್ಯುಲೇರ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ರೂಲ್.

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲಿ ಜಾರೀಯಿರುವ ನಡವಳಿತವನ್ನು ರದ್ದು ಮಾಡಿ ಇದರಡಿ ಬರುವ ನಿಬಂಧನೆಯನ್ನು ವಿಧಿಸೋಣಾಗಿರುತ್ತೆ.

ಯಿಚ್ಛೈವುಳ್ಳ ಚಂದದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡಬೇಕು.

ಅಮಲ್ದಾರರು ಹಾಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೆಜರಿಗೆ ಬಂದ ಮೊಬಲಗಿಗಾಗಿ ಕೊಡುವ ವಾಡಿಕೆಯಾದ ಅಚ್ಚಿನ ಸಮೂನೆಯಲ್ಲಿ ದ್ವಿಪ್ರತಿ ರಶೀತಿಯನ್ನು ಪಯಾರ್ಮಾಡಿ ಕೊಡತಕ್ಕದ್ದು.

ಚಂದಾದಾರನು ಡ್ಯೂಪ್ಲಿಕೇಟ್ ರಶೀತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಿಜಿನಲ್ ರಶೀತಿಯನ್ನು ತನ್ನ ದರಖಾಸ್ತಿನ ಸಂಗಡ ಮೈಸೂರು ಗೆಜೆಟ್ ಕಂಪೈಲರವರಿಗೆ ಕಳುಹಿಸತಕ್ಕದ್ದು.

ಕಂಪೈಲರವರು ಟ್ರೆಜರಿ ರಶೀತಿಯನ್ನು ಹಣಬಂದಂತೆ ಒಪ್ಪಿಕೊಳ್ಳುವರು.

ತಾರೀಖು 3ನೇ ಮೇ 1890.

ಕ್ಯಾಂಪ್ ನಂ. 301.—1887ನೇ ಇಸವಿಯ ಆಗಸ್ಟ್ 25ನೇ ಪುಟ 1060ನೇ ನಂಬರ್ ಇಸ್ತಿಹಾರ್‌ನಾಮೆಯು ರದ್ದು ಮಾಡಲ್ಪಟ್ಟಿರುತ್ತೆ.

2. 1878ನೇ ಇಸವಿ ಜೂನ್ 3ನೇ ಮಕ್ಕಂ ಫಾರೆಸ್ಟ್ ರೂಲ್‌ಸಿನ 32ನೇ ಸೆಕ್ಷನ್ 1ನೇ ಕಲಂ ಅನುಸರಿಸಿ ಇದರಿಂದ ಪ್ರಕಟ ಪಡಿಸುವದೇನಂದರೆ, ಇನಾಂ ಭೂಮಿಗಳಿಂದ, ಅಂಥಾ ಇನಾಂ ಭೂಮಿಗಳಿಗತಕ್ಕ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಿಂದಲಾಗಲಿ, ಅಥವಾ ಆ ಬಗ್ಯಾಗಿ ಡೆಪ್ಯುಟಿ ಕಮ್ಮಿಷನರಿಂದ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟ ಅಂಥಾ ಇತರ ಆಫಿಸರರಿಂದಲಾಗಲಿ ಕ್ರಮವಾದ ಪ್ಯಾಸ್ ಪಡೆದ ಹೊರ್ತು ಯಾವ ಗಿಡಗಳಾದರೂ ಮರಗಳಾದರೂ ನಾಟಾ ಆದರೂ ಸಾಗಿಸಲ್ಪಡಕೂಡದು.

ತಾರೀಖು 6ನೇ ಮೇ 1890.

ನಂ. 17.—1888ನೇ ಇಸವಿ IVನೇ ರೆಗ್ಯುಲೇಷನ್ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಕಲಂ ಅನುಸರಿಸಿ ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದವರು, ಸದರೀ ಕೋಡಿನ VIII ಮತ್ತು IXನೇ ಅಧ್ಯಾಯಗಳ ನಿಯಮಗಳು ಇದರಡಿ ಕಂಡ ಪರಭಾರೆಯಾದ ಗ್ರಾಮಗಳಲ್ಲಿ ಜಾರೀಗೆ ಬರತಕ್ಕದ್ದೆಂದು ಆಜ್ಞಾಪಿಸಿರುತ್ತಾರೆ.

ಗ್ರಾಮದ ಹೆಸರು	ಹೋಬಳಿ	ತಾಲ್ಲೂಕು
ಕೆಂಪಾಪುರ	ನುಲ್ಲೂರು	ಮಾಗಡಿ
ಮತ್ತಿಕೆರೆ	ಯಕವಂತಪುರ	ಬೆಂಗಳೂರು
ಪೂರ್ಣಾಪುರ	ಯಲಹಂಕ	ಡಿಟೋ

ತಾರೀಖು 8ನೇ ಮೇ 1890.

ನಂ. 14.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಹಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಸೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಸೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅನ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ, ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಿಡ್ಡಿ ಯಾ ಇತರ ಖರ್ಚುಗಳು ದೇಖರೇಖ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿ ಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೇ ಸೆಕ್ಷನ್ ಅನುಸರಿಸಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುಕೂಫ್ ಮಾಡಲ್ಪಡುವದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫದ್ದ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪೇಲಿನ್ನಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ಮುಕ್ತಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು. ತಾಲ್ಲೂಕು. ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರಿ.	ಅಂದಾಜು ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋ ಸ್ತರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
			ಖಂ. ಕು. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ. ಬಿವರಿಂಗ್‌ಪೇಟೆ. ಬೇತಮಂಗಲ.	ಜೋಡೀ ಪೋತರಾಜಪಲ್ಲಿ	ಆನೆಕಲ್ ರಾಮಾಚಾರ್ ಇತರ 3 ಮಂದಿ.	12 11 13¼	145 0 0	98 11 3		
					1882—83	3 13 5	ಸ್ 1890ನೇ ಇಸವಿ ಜೂನ್ ತಾರೀಖು 20ರ ಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್ರ ರೂಬರೂ
					1884—85	19 10 8	
					1885—86	17 12 3	
					1886—87	30 10 5	
					1887—88	71 0 10	
					1888—89	73 11 3	
					1889—90	89 10 3	
					ಲೋಕಲ್‌ಸೆಸ್	9 1 0	
					ಬಾಂಡ್‌ಲಾಗವಡು	5 14 0	
					ನೋಟಿಸ್ ಫಿ	4 0 0	
					ಕಂಟ್ರಬ್ಯೂಷನ್	955 0 0	
					ಜುಮ್ಲಾ ಮತ್ತು ಹರಾಜ್ ತಾರೀಖು ವರಿಗೆ ಬಡ್ಡಿ	1280 4 1	

ಷರಾ.—ಜೋಡೀದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಇವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ ದೇತೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವ ದಿಲ್ಲ.

ತಾರೀಖು 6ನೇ ಮೇ 1890.

ನಂ. 12.—ಸ್ 1870ನೇ ಇಸವಿಯ 10ನೇ ಲ್ಯಾಂಡ್ ಅಕ್ವಿಜಿಷ್ನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ, ಸರ್ಕಾರದ ಕೆಲಸ ಕ್ಕಾಗಿ ಅಂದರೆ ಸೊರಬ ತಾಲ್ಲೂಕು ಜಾಡೆ ಯಂಬ ಸ್ಥಳದಲ್ಲಿ ಪೊಲೀಸ್ ಸ್ಟೇಷನ್ ಕಟ್ಟತಕ್ಕ ಬಗ್ಗೆ ಇದರಡಿ ಕಂಡ ತಖ್ತೆಯಲ್ಲಿ ನಮೂದಾಗುವ ಜಮೀನು ಬೇಕಾಗಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಜಮೀನಿನ ವಿವರ ಬೀಜವರಿ ವ ಆಕಾರ.				ಷರಾ.
					ತಪಶೀಲು ವ ನಂಬರ್.	ಬೀಜವರಿ.	ಆಕಾರ.		
						ಗುಂಟೆ	ಗಜ		
ಶಿವಮೊಗ್ಗಾ	ಸೊರಬ	ಜಾಡೆ	ಜಾಡೆ	ಪರ್ಯಸ್ಥಳದಲ್ಲಿರುವ ಸ್ವಾಮಿರಾವ್ ರಾಮಚಂದ್ರ	ಗ್ರಾಮ ನಿವೇಶನದಲ್ಲಿರುವ ಒಂದು ಹಿಚ್ಚಲು ಭೂಮಿ ಹಳ್ಳೇ ಡಾಗಿ ಕಾಸ್ತಾಗಿರುವ ಪೈಮಾಷ್ ನಂ. 110	1	104	0 0 0	ಈ ಜಮೀನಿನ ಚಕ್ಕುಬಂದೀ ವಿವರ ಪೂರ್ವಕ್ಕೆ-ಗಾಣಿಗೆರೆಯಿಂದ ಬಸಯ್ಯನ ಮನೆಯ ಗೋಡೆ ವ ಪೊದೆ ಪಶ್ಚಿಮಕ್ಕೆ-ಹಿತ್ತಲಿನ ಒಂದು ಭಾಗ ಉತ್ತರಕ್ಕೆ-ಪಬ್ಲಿಕ್ ರಸ್ತೆ ದಕ್ಷಿಣಕ್ಕೆ-ಸದರೀ ಹಿತ್ತಲ್ ಜಮೀನಿನ ಬಂದು ಭಾಗ

ತಾರೀಖು 15ನೇ ಮೇ 1890.

ನಂ. 19.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವವು.

2. ಪರಂತು ಒಂದು ಗ್ರಾಮವು ಜೇರೆಜೇರೆಯಾಗಿ ಮಂಜೂರ್ಮಾಡಲ್ಪಟ್ಟು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಜೇರೆಜೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮಿನಾನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮಿನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೇ ಸೆಕ್ಷನ್ ಅನುಸಾರವಾಗಿ ಜಾಮೀನಿ ಕೊಟ್ಟಾಗ್ಯೂ ಹರಾಜ್ ಮುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾಕರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ, ಇರುವ ಗಲ್ಲತ್‌ಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ತಿಪ್ಪಟ್ಟೂರು. ತಾಲ್ಲೂಕು. ಹೋಬಳಿ.	ಗ್ರಾಮ.	ಜೋಡಿವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
			ಎ. ಗುಂ.	ರೂ. ಅ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ ತಿಪ್ಪಟ್ಟೂರು ತಾಲ್ಲೂಕು ಹೊಸಕೋಟೆ	ಕಾಯಂಗುತ್ತಾ ಸುಬ್ಬಾಯನಪೇ	ಚಕ್ಕವಾಂಡು ರಾವ್	356 13 0	267 0 0 1888—89ನೇ 1889—90ನೇ	108 6 0 ಸಾಲಿಗೆ ಸಾಲಿಗೆ ಲೋಕಲ್‌ಸೆಸ್ ನೋಟೀಸ್ ಫಿ ಜುಮ್ಲಾ ಮತ್ತು ಹರಾಜ್ ತಾರೀಖುವರಿಗಿನ ಬಡ್ಡಿ	84 5 8 102 0 0 12 12 0 1 0 0 200 1 8	1890ನೇ ಇಸವಿ ಜೂನ್ ತಾರೀಖು 24ರಲ್ಲು ತಾಲ್ಲೂಕ್ ಕಛೇರಿಯಲ್ಲಿ ಅಮಲ್‌ದಾರ್ರ ರೂಬರೂ

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋ ಸ್ಕರ ಗ್ರಾಮಗಳುಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎಕರೆ. ಗುಂ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ	ಬಿಡ್ಲಪ್ಪು	ಜಂಗಮನಕೋಟೆ	ಕಾಯಂಗುತ್ತಾ ನಡಪುನಾಯಕನಹಳ್ಳಿ	ೀನಪ್ಪ	1493 37 0	650 12 0 1889—90ನೇ ಸಾಲಿಗೆ ಲೋಕಲ್‌ಸೆಸ್ ಜಿಲ್ಲರೇ ಇನಾಮಿನ ನೋಟಿಸ್ ಫೀ	674 6 3 ಮೇಲೆ ಕ್ವಿಟ್‌ರೆಂಟ್ ಜುಮ್ಲಾ ಮತ್ತು ಹರಾಜ್ ತಾರೀಖು ವರಿಗೆ ಬಡ್ಡಿ	431 0 0 26 15 0 16 7 3 1 0 0 475 6 3	1890ನೇ ಇಸವಿ ಜೂನ್ ತಾರೀಖು 24ರಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂ ಬರೂ
	ಬಂಗಾರಪೇಟೆ	ಸರಗನಹಳ್ಳಿ	ಜೋಡಿ ಸೀಗಾಲಪಳ್ಳ್ಯ	ಸುಂದರರಾವ್, ಭಾತುಲ್ಲುನಾಬಿ ಗೋವಿಂದರಾವ್	ಖಂ. ಕೂ. ಪ. 18 0 0	80 3 11 1884—85ನೇ ಸಾಲಿಗೆ 1885—86ನೇ ಡಿಟೋ 1887—88ನೇ ಡಿಟೋ ನೋಟಿಸ್ ಫೀ	33 9 2 ಜುಮ್ಲಾ ಮತ್ತು ಹರಾಜ್ ತಾರೀಖು ವರಿಗೆ ಬಡ್ಡಿ	10 14 1 25 0 11 0 4 2 1 0 0 56 0 4	ಡಿಟೋ

ಪರಾ.—ಜೋಡಿವ ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ ಉಂಟುಮಾಡಲ್ಪಟ್ಟ ತಮಾಂ ಹಿಡುವಳಿ ಯಾ ದೇಣಿಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲೀ ಸದರೀ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 13ನೇ ಮೇ 1890.

ನಂ. 20.—1889ನೇ ಇಸವಿ ಫಿಬ್ರವರಿ 5ನೇ ಮುಕ್ತಂ 7140—71 ಸರ್ಕ್ಯುಲರ್ 200ನೇ ನಂಬರುಳ್ಳ ಪ್ರೊಸೀಡಿಂಗ್ಸಿನ ಪ್ರಕಾರ ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಎಸ್. ವೈದ್ಯನಾಥಯ್ಯರವರು, 1890ನೇ ಇಸವಿ ಮೇ 1ನೇ ಮುಕ್ತಂ ಲಾಗಾಯತು 7 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 17ನೇ ಮೇ 1890.

ನಂ. 21.—ಮೆಸ್ಟರ್ ಎ. ಕುಪ್ಪುಸಾಮಿ ಮೊದಲಿಯಾರ್ ಯವರು, ಕೋಲಾರ ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜನ್ನು 1890ನೇ ಇಸವಿ ಏಪ್ರಿಲ್ 12ನೇ ಮುಕ್ತಮಿನ ಮಧ್ಯಾನ್ಹಾತ್ಪರ ಮೆಸ್ಟರ್ ಎಚ್. ರಾಮಾನುಜಯ್ಯಂಗಾರ್ರಿಗೆ ಒಪ್ಪಿಸಿರುತ್ತಾರೆ.

ಮೆಸ್ಟರ್ ಬಿ. ಕೃಷ್ಣಯ್ಯಂಗಾರ್ರವರು ಭಂಗಾರದ ಗಣಿಯ ಅಸಿಸ್ಟೆಂಟ್ ಕಮ್ಮಿಷನರ್ ಆಫಿಸ್ ಚಾರ್ಜನ್ನು 1890ನೇ ಇಸವಿ ಏಪ್ರಿಲ್ 18ನೇ ಮುಕ್ತಮಿನ ಮಧ್ಯಾನ್ಹಾತ್ಪರ ಮೆಸ್ಟರ್ ಎ. ಕುಪ್ಪುಸಾಮಿ ಮೊದಲಿಯಾರ್ ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 20ನೇ ಮೇ 1890.

ನಂ. 22.—ಮೈಸೂರು ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರಾದ ಮೆಸ್ಟರ್ ಎಸ್. ಹೇನಾಜಿರಾಯರು, ಚೀಫ್ ಕೋರ್ಟಿನ ರಿಜಿಸ್ಟ್ರಾರ್ ಕೆಲಸಕ್ಕೆ ಮರಳಿ ಹೋಗುವ ಬಗ್ಗೆ ಅವರ ಖಾಯಿಷ್ ಮೇರೆ ಅಪ್ಪಣೆ ಕೊಟ್ಟಿರುತ್ತಾರೆ.

ತಿವಮೊಗ್ಗದಲ್ಲಿನ ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರಾದ ಮೆಸ್ಟರ್ ಟಿ. ನರಹರಿರಾವ್ ಎಂ. ಎಲ್. ಯವರು, ಮೈಸೂರಿನ ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರಾಗಿರತಕ್ಕದ್ದು. ಕೂಡ್ಲೆ ಉದ್ಯೋಗದ ಮೇಲೆ ಹೋಗತಕ್ಕದ್ದು.

ತುಮಕೂರು ಡೆಪ್ಯುಟಿ ಕಮ್ಮಿಷನರಾದ ಮೆಸ್ಟರ್ ಸಿ. ಕ್ರೈಸ್ ಯವರು, ತವಮೊಗ್ಗದಲ್ಲಿನ ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜೀರಾಗಿರ ತಕ್ಕದ್ದು. ಕೂಡ್ಲೆ ಉದ್ಯೋಗದ ಮೇಲೆ ಹೋಗತಕ್ಕದ್ದು.

ತಾರೀಖು 19ನೇ ಮೇ 1890.

ನಂ. 23.—ಗ್ರಾಮದ ರೈತರ ಖಾಯಿಷ್ ಮೇರಿಗೆ ಬಾಗೇಪಲ್ಲಿ ತಾಲ್ಲೂಕು ಚಿಕ್ಕಬಳ್ಳಾರು ಹೋಬಳಿಯಲ್ಲಿರುವ ದೈಯ್ಯಾಲಪಲ್ಲಿ ಎಂಬ ಗ್ರಾಮದ ಹೆಸರು, ಪೆದ್ದಪಲ್ಲಿ ಎಂಬದಾಗಿ ಬದಲಾಯಿಸಲ್ಪಟ್ಟಿರುತ್ತ್.

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಿಟೆರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿ ಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಿಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಿಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವವು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಹುಕುಂ ಬಮೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರಿಟೆರಿ.

[redacted]

ತಾರೀಖು 21ನೇ ಮಾಹೆ ಮೇ 1890ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಸ್ 1891ನೇ ಇಸವಿ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಶ್ರೀನಿವಾಸಪುರ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆಯಾಗುವಂಥ ವಿದ್ಯಾರ್ಥಿಗಳಿಗೆ ಇದರಡಿಕಂಡ ಬಹುಮಾನಗಳು ಕೊಡಲ್ಪಡುವವು:—

(i)	ರಾಮಾನುಜಾಚಾರ್ ಹೆಡ್ ಮಾಸ್ಟರ್ ಗವರ್ಮೆಂಟ್ ಕನ್ನಡ ಸ್ಕೂಲ್ ಶ್ರೀನಿವಾಸಪುರ.	ವಿಶಿಷ್ಟಾಂಕಗಳು ಸೇರಿ ಮೊದಲನೇ ಯವನಾಗಿ ತೇರ್ಗಡೆಯಾಗುವಂಥಾ ವಿದ್ಯಾರ್ಥಿಗೆ.	ಸಟೀಕಾ, ಜೈಮಿನಿ ಉತ್ತರಾರ್ಧ.
(ii)	ಸುಬ್ಬಾಶಾಸ್ತ್ರಿ ಶ್ರೀನಿವಾಸಪುರ (ಹೆಡ್‌ಮಾಸ್ಟರ್ ಮುಖಾಂತ್ರ.)	ಐಚ್ಛಿಕಾಂಕಗಳಲ್ಲಿ ಅಧಿಕವಾದ ನಂಬರು ಪಡೆಯುವಂಥಾ ವಿದ್ಯಾರ್ಥಿಗೆ	ಸಟೀಕಾ, ಶಬ್ದಮಣಿ ದರ್ಪಣ ಮೆಂಗಳೂರು ಛಾಪ.
(iii)	ಕೃಷ್ಣಮಾಚಾರ್ ಟೀಚರ್, ಗರಲ್ ಸ್ಕೂಲ್ ಶ್ರೀನಿವಾಸಪುರ (ಹೆಡ್‌ಮಾಸ್ಟರ್ ಮುಖಾಂತ್ರ.)	ಗಣಿತದಲ್ಲಿ ಅಧಿಕ ನಂಬರುಗಳನ್ನ ಪಡೆಯುವಂಥಾ ವಿದ್ಯಾರ್ಥಿಗೆ	ಗಣಿತಾರ್ಣವ.
(iv)	ಎಸ್. ಶ್ರೀನಿವಾಸಯ್ಯ, ಶ್ರೀನಿವಾಸಪುರ (ಹೆಡ್‌ಮಾಸ್ಟರ್ ಮುಖಾಂತ್ರ.)	ಚರಿತ್ರೆ ಮತ್ತು ಭೂಗೋಳಗಳಲ್ಲಿ ಅಧಿಕವಾದ ನಂಬರುಗಳು ಪಡೆಯುವಂಥಾ ವಿದ್ಯಾರ್ಥಿಗೆ	ನಾಲ್ಕು ರೂಪಾಯಿ ಬೆಲೆಯುಳ್ಳ ಬಂದು ಪೆಳ್ಳೀ ಬಟ್ಟು.
(v)	ಸುಬ್ಬರಾಯಪ್ಪ ಪಟೇಲ್, ಶ್ರೀನಿವಾಸಪುರ (ಹೆಡ್‌ಮಾಸ್ಟರ್ ಮುಖಾಂತ್ರ.)	ಭಾಷಾಗ್ರಂಥಗಳಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವ ವಿದ್ಯಾರ್ಥಿಗೆ	ಗುರುಬಾಲ ಪ್ರಬೋಧಿಕ.

1890ನೇ ಇಸವಿ ಮೇ ತಾರೀಖು 3ರಲ್ಲು ಪ್ರಾಯಿಷಾದ 17ನೇ ನಂಬರು ಗೆಜಟ್ಟಿನ 192ನೇ ಪುಟದಲ್ಲಿ,

ರೆಜಿಸ್ಟರ್ ನಂಬರು.	ಹೆಸರು.	ಸ್ಕೂಲ್.
248	ಎಸ್. ಸುಬ್ಬರಾಯಸೆಟ್ಟಿ.	ಗವರ್ಮೆಂಟ್ ಕನ್ನಡ ಸ್ಕೂಲ್ ನಾಗರ ಎಂಬುವದಕ್ಕೆ ಬದಲಾಗಿ,
ರೆಜಿಸ್ಟರ್ ನಂಬರು.	ಹೆಸರು.	ಸ್ಕೂಲ್.
248	ಎಸ್. ಸುಬ್ಬರಾಯಸೆಟ್ಟಿ.	ಗವರ್ಮೆಂಟ್ ಕನ್ನಡ ಸ್ಕೂಲ್ ನರ್ಗೂರು ಎಂದು,

ಓದತಕ್ಕದ್ದು.

ಹೆಚ್. ಜೆ. ಬಾಬು,
ಎಜ್ಯುಕೇಷನ್ ಸೆಕ್ರಿಟೆ.